# ಕರ್ನಾಟಕ ಅರಣ್ಯ ಇಲಾಖೆ

ಸಂ. ಬಿ6/ಎಸ್‌ಸಿಪಿ-ಟಿಎಸ್‌ಪಿ/ಸಿಆರ್-14/2017-18

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ರವರ ಕಛೇರಿ,
"ಅರಣ್ಯ ಭವನ", ಬೆಂಗಳೂರು,
ದಿನಾಂಕ: 30-11-2021.

**ಇವರಿಗೆ,**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೆ,

**ವಿಷಯ:** ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವತಿಯಿಂದ ಕೈಗೊಂಡ ಮೌಲ್ಯಮಾಪನ ವರದಿಯ ಶಿಫಾರಸ್ಸುಗಳ ಮೇಲಿನ ಕ್ರಮಗಳ ಬಗ್ಗೆ.

**ಉಲ್ಲೇಖ:**
1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮೌಲ್ಯಮಾಪನ), ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: ಸಿಸಿಎಫ್(ಮೌಮಾ)ಎ3/ಸಿಆರ್-4/2017-18, ದಿನಾಂಕ 20-10-2010.
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 03-11-2020, 19-01-2021.
3. ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಇಎ-14/ಇಬಿಎನ್/2017, ದಿನಾಂಕ 16-01-2021.
4. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅಪಜೀ ಇವರಿಗೆ ಬರೆದ ಅರೆ ಸರ್ಕಾರಿ ಪತ್ರ ಸಂಖ್ಯೆ: ಕೆಇಎ 51 ಎಟಿಆರ್ 2019, ದಿನಾಂಕ 30-09-2021.

KEA Pe 06/12/21 Clw 7/12 ADII (KEA)

* * * * *

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 2013-14 ರಿಂದ 2016-17ನೇ ಸಾಲಿನವರೆಗೆ ಕೈಗೊಂಡ ಕಾರ್ಯಕ್ರಮಗಳ ಮೌಲ್ಯಮಾಪನ ವರದಿಯ ಮೇಲಿನ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಅನುಪಾಲನ ವರದಿಯನ್ನು ಸಲ್ಲಿಸುವಂತೆ ಉಲ್ಲೇಖ(1)ರ ಪತ್ರದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮೌಲ್ಯಮಾಪನ), ಬೆಂಗಳೂರು ಇವರು ಸೂಚಿಸಿರುತ್ತಾರೆ. ಈ ಸಂಬಂಧ ವರದಿ ಸಲ್ಲಿಸುವಂತೆ ಉಲ್ಲೇಖ(2)ರ ಈ ಕಛೇರಿ ಪತ್ರದಲ್ಲಿ ಅನುಷ್ಠಾನಾಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು.

ಉಲ್ಲೇಖ(4)ರ ಪತ್ರದಲ್ಲಿ ಈ ಸಂಬಂಧ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಆದ್ದರಿಂದ ಅನುಷ್ಠಾನಾಧಿಕಾರಿಗಳಿಂದ ಸ್ವೀಕೃತವಾದ ಮಾಹಿತಿಯನ್ನಾಧರಿಸಿ ಕ್ರೋಢೀಕೃತ ವಿವರಗಳಂತೆ ಮೌಲ್ಯಮಾಪನ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆ.

| ಕ್ರ. ಸಂ. | ಮೌಲ್ಯಮಾಪನ ವರದಿಯ ಶಿಫಾರಸ್ಸು | ಅನುಪಾಲನ ವರದಿ |
|---|---|---|
| 1. | ಕರ್ನಾಟಕ ಅರಣ್ಯ ಇಲಾಖೆ, ಅರಣ್ಯ ಅಂಚಿನ 5.00 ಕಿ.ಮೀ. ವ್ಯಾಪ್ತಿಯಲ್ಲಿರುವ ಎಲ್ಲಾ ಪರಿಶಿಷ್ಟ ಜಾತಿ & ಪರಿಶಿಷ್ಟ ಬುಡಕಟ್ಟು ಕುಟುಂಬಗಳಿಗೆ 25% ಹೆಚ್ಚುವರಿ ಸಹಾಯಧನ ನೀಡಬೇಕು. ಅರಣ್ಯ ರಕ್ಷಣೆಗಾಗಿ ಈ ಕುಟುಂಬಗಳಿಗೆ ಸೋಲಾರ್ (ಸೌರ) ಕುಕ್ಕರ್ ನೀಡಬೇಕಾಗಿದೆ. | ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನೊಂದಾಯಿತ ಫಲಾನುಭವಿಗಳಿಗೆ ನೀಡಲಾಗುತ್ತಿರುವ ರೂ.125/-(ಮೂರು ವರ್ಷಕ್ಕೆ)ಗಳ ಪ್ರೋತ್ಸಾಹಧನದ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಫಲಾನುಭವಿಗಳಿಗೆ ಇನ್ನೂ ಶೇ.25ರಷ್ಟು ಹೆಚ್ಚಿನ ಪ್ರೋತ್ಸಾಹ ಧನವನ್ನು ಕ್ರಮ ಕೈಗೊಳ್ಳಬಹುದು ಹಾಗೂ ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯಡಿ ರೈತರ ಜಮೀನಿನಲ್ಲಿ ಬೆಳೆಸಲಾಗುವ ಬಿದಿರು ನೆಡುತೋಪು ನಿರ್ಮಾಣಕ್ಕೆ |

| | | |
|---|---|---|
| | | ನೀಡಲಾಗುತ್ತಿರುವ ಪ್ರತಿ ಹೆ. ರೂ.50,000/-ಗಳ ಜೊತೆಗೆ ಈ ಪಂಗಡದ ಫಲಾನುಭವಿಗಳಿಗೆ ಹೆಚ್ಚಿನ ಶೇ.25ರಷ್ಟು ಸಹಾಯಧನವನ್ನು ನೀಡಬಹುದು. ಈ ಬಗ್ಗೆ ಸರ್ಕಾರದ ಹಂತದಲ್ಲಿ ಆದೇಶವಾಗಬೇಕಾಗಿರುತ್ತದೆ.<br>ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಎಲ್.ಪಿ.ಜಿ ಗ್ಯಾಸ್ ಎಲ್ಇಡಿ ಲ್ಯಾಂಪ್ಸ್ ಸೋಲಾರ್ ಲೈಟ್ಸ್, ಸರಳ ಒಲೆ, ಸೋಲಾರ್ ವಾಟರ್ ಹೀಟರ್ಸ್ ಗೋಬರ್ ಗ್ಯಾಸ್, ಸೌಲಭ್ಯಗಳನ್ನು ಒದಗಿಸಲಾಗಿದ್ದು, ಸೋಲಾರ್ (ಸೌರ) ಕುಕ್ಕರ್ ವಿತರಿಸಲು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ, ರಾಜ್ಯ ಪರಿಶಿಷ್ಟ ಜಾತಿ / ಪಂಗಡದ ಅಭಿವೃದ್ಧಿ ಪರಿಷತ್ತಿನಲ್ಲಿ ಅನುಮೋದಿಸಿದ ಪಕ್ಷದಲ್ಲಿ ಕ್ರಮ ಕೈಗೊಳ್ಳಲಾಗುವುದು. |
| 2. | ಸೋಲಾರ್ ದೀಪಗಳನ್ನು ಸರಬರಾಜು ಮಾಡುವ ಏಜೆನ್ಸಿಗಳು ಗ್ಯಾರಂಟಿ ಅವಧಿಯಲ್ಲಿ ಸಮಸ್ಯೆಗಳು ತಲೆದೋರಿದಾಗ ಸ್ಪಂದಿಸಬೇಕು ಹಾಗೂ ಈ ಪ್ರಕ್ರಿಯೆಗಳನ್ನು ಕರ್ನಾಟಕ ಅರಣ್ಯ ಇಲಾಖೆ ಉಸ್ತುವಾರಿ ಮಾಡಬೇಕು. | ಸೋಲಾರ್ ದೀಪಗಳನ್ನು ಅಳವಡಿಸಿದ ಏಜೆನ್ಸಿಗಳಿಗೆ ಗ್ಯಾರಂಟಿ ಅವಧಿಯಲ್ಲಿ ಸಮಸ್ಯೆಗಳು ತಲೆದೋರಿದಾಗ ಸ್ಪಂದಿಸಲು ಈಗಾಗಲೇ ಸೂಚನೆ ನೀಡಲಾಗಿರುತ್ತದೆ. ಮುಂದುವರೆದು, ಬೀದಿ ದೀಪಗಳ ನಿರ್ವಹಣೆ ಹಾಗೂ ದುರಸ್ಥಿ ಕಾರ್ಯವನ್ನು ಕರ್ನಾಟಕ ಅರಣ್ಯ ಇಲಾಖೆಯು ವಾರ್ಷಿಕ ನಿರ್ವಹಣಾ ಗುತ್ತಿಗೆ ನೀಡುವುದರ ಮೂಲಕ ನಿರ್ವಹಣೆ ಮಾಡಬಹುದು. ಈ ರೀತಿ ಕ್ರಮ ಕೈಗೊಂಡಲ್ಲಿ ನಿರ್ವಹಣೆಗಾಗಿ ಅನುದಾನದ ಅವಶ್ಯಕತೆ ಇದ್ದು. ಸರ್ಕಾರದ ವತಿಯಿಂದ ಅನುದಾನ ಬಿಡುಗಡೆಯಾದಲ್ಲಿ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| 3. | ಸೋಲಾರ್ ನೀರಿನ ಹೀಟರ್‌ಗಳನ್ನು ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಸಮುದಾಯಗಳಿಗೆ ಒದಗಿಸುವುದು. ಅವರ ಅರಣ್ಯಾವಲಂಬನೆಯನ್ನು ಕಡಿಮೆ ಮಾಡುತ್ತದೆಯಾದ್ದರಿಂದ ಈ ಕಾರ್ಯಕ್ರಮವನ್ನು ಹೆಚ್ಚು ವ್ಯಾಪಕವಾಗಿ ಕೈಗೊಳ್ಳಬೇಕು. ಆದರೆ ಕೆಲ ಎಚ್ಚರಿಕೆಗಳನ್ನು ವಹಿಸುವ ಅಗತ್ಯವಿದೆ. ಅಧಿಕವಾಗಿ ಸೃಷ್ಟಿಯಾಗುವ ಕಾವನ್ನು ಹೊರಹಾಕಲು ಸೂಕ್ತವಾದ ಪೈಪುಗಳನ್ನು ಅಳವಡಿಸಬೇಕಾಗಿದೆ. ಸರಿಯಾದ ರೀತಿಯಲ್ಲಿ ಪೈಪುಗಳನ್ನು ನಿರ್ವಹಣೆ ಮಾಡಿದಾಗ, ಬಿಸಿನೀರು ನಿರಂತರವಾಗಿ ಸರಬರಾಜಾಗುತ್ತದೆ. ಈ ವಸ್ತುಗಳನ್ನು ಸರಬರಾಜು ಮಾಡುವ ಏಜೆನ್ಸಿಗಳ ಉಸ್ತುವಾರಿ ಕರ್ನಾಟಕ ಅರಣ್ಯ ಇಲಾಖೆಯಿಂದ ನಡೆಯಬೇಕಾಗಿದೆ. | ಈ ಹಿಂದೆ ನೀಡಲಾದ ಸೋಲಾರ್ ವಾಟರ್ ಹೀಟರ್‌ಗಳಿಗೆ ಅಧಿಕವಾಗಿ ಸೃಷ್ಟಿಯಾಗುವ ಕಾವನ್ನು ಹೊರಹಾಕಲು ಸೂಕ್ತವಾದ ಪೈಪುಗಳನ್ನು ಅಳವಡಿಸಲಾಗಿದೆ ಮುಂದುವರೆದು, ಬೀದಿ ದೀಪಗಳ ನಿರ್ವಹಣೆ ಹಾಗೂ ದುರಸ್ಥಿ ಕಾರ್ಯವನ್ನು ಕರ್ನಾಟಕ ಅರಣ್ಯ ಇಲಾಖೆಯು ವಾರ್ಷಿಕ ನಿರ್ವಹಣಾ ಗುತ್ತಿಗೆ ನೀಡುವುದರ ಮೂಲಕ ನಿರ್ವಹಣೆ ಮಾಡಬಹುದು. ಈ ರೀತಿ ಕ್ರಮ ಕೈಗೊಂಡಲ್ಲಿ ನಿರ್ವಹಣೆಗಾಗಿ ಅನುದಾನದ ಅವಶ್ಯಕತೆ ಇದ್ದು. ಸರ್ಕಾರದ ವತಿಯಿಂದ ಅನುದಾನ ಬಿಡುಗಡೆಯಾದಲ್ಲಿ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| 4. | ಸಿಲಿಂಡರ್ ಬೆಲೆ ಹೆಚ್ಚಾದರೆ, ಕರ್ನಾಟಕ ಅರಣ್ಯ ಇಲಾಖೆ ಸರಳ ಒಲೆಗಳ ಸರಬರಾಜನ್ನು ಮರುಪ್ರಾರಂಭ ಮಾಡಬಹುದು | ಕೆಲವು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈಗಾಗಲೇ ಸರಳ ಒಲೆಗಳ ಸರಬರಾಜನ್ನು ಮಾಡಲಾಗಿದ್ದು, ಹೆಚ್ಚಿನ ಪ್ರಮಾಣದ ಫಲಾನುಭವಿಗಳು ಸರಳ ಒಲೆ ಉಪಯೋಗಿಸಲು ಆಸಕ್ತ ತೋರದ ಕಾರಣ ಎಲ್‌ಪಿಜಿ ಸಂಪರ್ಕ ನೀಡುವುದು ಸೂಕ್ತವಾಗಿರುತ್ತದೆ. ಈಗಾಗಲೇ ಇಲಾಖೆಯಿಂದ ರೀಫಿಲ್ ಸಿಲಿಂಡರ್‌ಗಳನ್ನು ಸಹ ಉಚಿತವಾಗಿ ಪೂರೈಸಲಾಗುತ್ತಿದೆ ಹೆಚ್ಚಿನ ಅನುದಾನ ಹಂಚಿಕೆಯಾದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೀಫಿಲ್ ಸಿಲಿಂಡರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ, ಒಂದು ವೇಳೆ ರೀಫಿಲ್ಲಿಂಗ್ ಸಿಲಿಂಡರಿನ ವೆಚ್ಚದಲ್ಲಿ ಏರಿಕೆ ಕಂಡುಬಂದಲ್ಲಿ ಸರಳ ಒಲೆ |

| | | |
|---|---|---|
| | | ಸರಬರಾಜು ಮಾಡಲು ಕ್ರಮ ಕೈಗೊಳ್ಳಬಹುದು |
| 5 | ಹಣ್ಣಿನ ತೋಟಗಳಿಗೆ ಅವಶ್ಯವಾದ ಸಸಿಗಳು ಹಾಗೂ ಕಸಿ ಮಾಡಿದ ಸಸ್ಯ ಜಾತಿಗಳನ್ನು ಕರ್ನಾಟಕ ಅರಣ್ಯ ಇಲಾಖೆಯೇ ಬೆಳೆಯಬೇಕು ಖಾಸಗಿ ನರ್ಸರಿಗಳಿಂದ ಅಥವಾ ತೋಟಗಾರಿಕೆ ಇಲಾಖೆಯಿಂದ ಈ ಸಸಿಗಳನ್ನು ಕೊಳ್ಳುವುದನ್ನು ನಿಲ್ಲಿಸಬೇಕು. ಆದರೆ ಇಲಾಖೆಯ ಬಳಿ ರೈತರು ಕೇಳುವಂತಹ ಹಣ್ಣಿನ ಸಸಿಗಳು ಇಲ್ಲದಿದ್ದಲ್ಲಿ, ತೋಟಗಾರಿಕೆ ಇಲಾಖೆಯೊಡನೆ ಒಡಂಬಡಿಕೆ ಮಾಡಿಕೊಂಡು ನೆಡುವ ಸಮಯ ಬರುವುದ್ದಕ್ಕೆ ಮುನ್ನವೇ ರೈತರಿಗೆ ಈ ಸಸಿಗಳನ್ನು ಒದಗಿಸಬೇಕಾಗಿದೆ. | ಅರಣ್ಯ ಇಲಾಖೆಯಲ್ಲಿ Species Planting Techniq Guidelines ಪ್ರಕಾರ ನಿಗಧಿಪಡಿಸಲಾದ ವಿವಿಧ ಅರಣ್ಯ ಜಾತಿಯ ಸಸಿಗಳನ್ನು ಮಾತ್ರ ಬೆಳೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಸಿ ಮಾಡಿದ ಸಸ್ಯ ಜಾತಿಗಳನ್ನು ಇಲಾಖೆಯಲ್ಲಿ ಬೆಳೆಸಲು ಅವಕಾಶವಿರುವುದಿಲ್ಲ. |
| 6 | ಮೇವು ಬೆಳೆಯುವ ಜಮೀನುಗಳು ಯಶಸ್ವಿಯಾಗಿಲ್ಲ. ಫಲಾನುಭವಿಗಳ ಆಯ್ಕೆ ಕೂಡ ಸೂಕ್ತ ರೀತಿಯಲ್ಲಿ ಆಗಿರುವುದಿಲ್ಲ. ರಾಜ್ಯದಲ್ಲಿ ಮೇವನ್ನು ಬೆಳೆಸುವ ಜವಾಬ್ದಾರಿಯನ್ನು ಪಶುಪಾಲನಾ ಇಲಾಖೆ ವಹಿಸಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಇಲಾಖೆ, ತೋಟಗಾರಿಕೆ ಇಲಾಖೆ,ಮತ್ತು ಕೃಷಿ ಇಲಾಖೆಗಳು ಕರ್ನಾಟಕ ಅರಣ್ಯ ಇಲಾಖೆಯೋಡನೆ ಕೈ ಜೋಡಿಸಬಹುದು. ಕೃಷಿ ಭೂಮಿಯ ದಂಡೆಗಳ ಮೇಲೆ ಮೇವು ಬೆಳೆಯುವಂತಹ ಯೋಜನೆಯನ್ನು ರೂಪಿಸಲು ಸಾಧ್ಯವಿದೆ. ಇದನ್ನು ಹಣ್ಣಿನ ತೋಟಗಳಲ್ಲೂ ಮಾಡಬಹುದು. ಆದರೆ, ಈ ಎರಡು ಯೋಜನೆ (ವಿ.ಫ.ಯೋ ಮತ್ತು ಗಿ.ಉ.ಯೋ) ಗಳಿಂದಲೂ ಜಾನುವಾರುಗಳಿಗೆ ಮೇವು ಒದಗಿಸಲು ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಕೈ ಬಿಡಬಹುದು. | ಇಲಾಖಾ ವತಿಯಿಂದ ಕೆಲವು ವಿಭಾಗಗಳಿಗೆ ಮಾತ್ರ ಮೇವು ಬೆಳೆಯುವ ಗುರಿಯನ್ನು ಹಂಚಿಕೆ ಮಾಡಲಾಗಿದ್ದು, ಅವುಗಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿರುವುದಿಲ್ಲವಾದ ಕಾರಣ ಈ ಕಾರ್ಯಕ್ರಮವನ್ನು ಕೈ ಬಿಡಲಾಗಿದೆ. |
| 7 | ಫಲಾನುಭವಿಗಳಿಗೆ ಬಿದಿರು ಸರಬರಾಜು ಮಾಡುವ ಪ್ರಯತ್ನಕ್ಕೆ ತೀರಾ ಕಡಿಮೆ ಗೋಚರತೆ ದೊರೆತಿದ್ದು, ಈ ಕಾರ್ಯಕ್ರಮಕ್ಕೆ ಹೆಚ್ಚು ಚಾಲ್ತಿ ನೀಡಬೇಕಷ್ಟೆ ಅಲ್ಲ ಫಲಾನುಭವಿಗಳನ್ನು ಚಾಪೆ, ಬುಟ್ಟಿ ಮುಂತಾದುವನ್ನು ತಯಾರು ಮಾಡಲು ತರಬೇತಿ ನೀಡಬೇಕು. ಇದರಿಂದ ಜೀವನ ನಿರ್ವಹಣೆಗಾಗಿ ಅವರು ಸ್ವಲ್ಪಮಟ್ಟಿನ ಆದಾಯವನ್ನು ಗಳಿಸಬಹುದು. ಎಲ್ಲಾ ವಿಭಾಗಗಳಲ್ಲೂ ಫಲಾನುಭವಿಗಳಿಗೆ ಒದಗಿಸುವ ಗಳಗಳು ಸಸ್ಯಜಾತಿ / ವರ್ಗಗಳ ಗುಣಮಟ್ಟವನ್ನು ನಿಗಧಿಪಡಿಸಿ, ಅದರ ಮೇಲು ಉಸ್ತುವಾರಿಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಅರಣ್ಯ ಇಲಾಖೆ ತೆಗೆದುಕೊಳ್ಳಬೇಕು. | ಕೆಲವೊಂದು ವಿಭಾಗಗಳಲ್ಲಿ ಈಗಾಗಲೇ ಅನುದಾನ ಲಭ್ಯತೆ ಅನುಸಾರ ಉತ್ತಮ ಗುಣಮಟ್ಟದ ಬೊಂಬುಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಫಲಾನುಭವಿಗಳಿಗೆ ಚಾಪೆ, ಬುಟ್ಟಿ ಮುಂತಾದ ಪರಿಕರಗಳನ್ನು ತಯಾರು ಮಾಡುವ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕೊಡಿಸಲಾಗಿರುತ್ತದೆ.<br><br>ಸರ್ಕಾರದ ವತಿಯಿಂದ ಹೆಚ್ಚಿನ ಅನುದಾನ ಒದಗಿಸಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಪ್ರಮುಖವಾಗಿ ಪರಿಶಿಷ್ಟ ಪಂಗಡದ ಮೇದಾರ ಜನಾಂಗದವರಿಗೆ ನೀಡಲಾಗುವುದು. |

| | | |
|---|---|---|
| 8 | ಜೈವಿಕ ಅನಿಲ (ಬಯೋಗ್ಯಾಸ್) ಘಟಕಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇವುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಫಲಾನುಭವಿಗಳಿಗೆ ತರಬೇತಿ ನೀಡದಿರುವುದರಿಂದ ಈ ಪರಿಸ್ಥಿತಿ ಏರ್ಪಾಡಾಗಿದೆ. ಮೇಲಾಗಿ ಜಾನುವಾರುಗಳನ್ನು ಸಾಕಿರದ ಕುಟುಂಬಗಳ ವಾಸಸ್ಥಾನದಲ್ಲಿ ಈ ಘಟಕಗಳನ್ನು ಸ್ಥಾಪಿಸಿರುವುದು ಸೂಕ್ತವಲ್ಲ. ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಕನಿಷ್ಟ 3 ಜಾನುವಾರುಗಳಾದರೂ ಇರುವಂಥ ಮನೆಗಳನ್ನು ಅರಣ್ಯ ಇಲಾಖೆ ಆಯ್ಕೆ ಮಾಡಬೇಕು. ಹಾಗೆ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಈ ಘಟಕಗಳನ್ನು ನಿರ್ವಹಿಸುವ ತರಬೇತಿಯನ್ನು ನೀಡಬೇಕು. | ಶಿಫಾರಸ್ಸನ್ನು ಒಪ್ಪಲಾಗಿರುತ್ತದೆ. ಜೈವಿಕ ಅನಿಲ (ಬಯೋಗ್ಯಾಸ್) ವಿತರಣೆಗೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಹಂಚಿಕೆ ಮಾಡಿದಲ್ಲಿ ಜಾನುವಾರುಗಳು ಇರುವಂತಹ ಮನೆಗಳಿಗೆ ಅನಿಲ ಘಟಕವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ತರಬೇತಿಯನ್ನು ಹಮ್ಮಿಕೊಳ್ಳಲಾಗುವುದು |
| 9 | ತಾಂತ್ರಿಕ ನೆರವು ದೊರೆಯದ ಕಾರಣ ಜೇನುಸಾಕುವ ಪೆಟ್ಟಿಗೆಗಳನ್ನು ನಿರ್ವಹಿಸಲಾಗಲೀ, ಜೇನು ನೊಣಗಳ ಸಾಕಾಣಿಕೆ ಮಾಡಲಾಗಲಿ ಫಲಾನುಭವಿಗಳಿಗೆ ಸಾಧ್ಯವಾಗಲಿಲ್ಲ. ಇದು ಜೇನು ತುಪ್ಪದ ಸಂಗ್ರಹಣೆಗೂ ಅನ್ವಯಿಸುತ್ತದೆ. ಈ ಕಾರ್ಯಕ್ರಮದ ಯಶಸ್ವಿ ನಿರ್ವಹಣೆಯಾಗಬೇಕಾದರೆ ಫಲಾನುಭವಿಗಳ ಆಯ್ಕೆ, ಅವರಿಗೆ ತರಬೇತಿ ನೀಡುವುದು, ಸೂಕ್ತವಾದ ಪೆಟ್ಟಿಗೆಗಳನ್ನು ಸರಬರಾಜು ಮಾಡುವುದು ಹಾಗು ಜೇನು ನೊಣಗಳನ್ನು ಒದಗಿಸುವುದು. ಈ ಎಲ್ಲಾ ಜವಬ್ದಾರಿಯನ್ನು ನಿರ್ವಹಣೆ ಕರ್ನಾಟಕ ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿ ನಡೆಯಬೇಕು. | ಜೇನು ಸಾಕಾಣಿಕೆಯಲ್ಲಿ ಆಸಕ್ತಿಯುಳ್ಳ ಫಲಾನುಭವಿಗಳನ್ನು ಆಯ್ಕೆ ಮಾಡಿ ಉತ್ತಮವಾದ ಜೇನು ಪೆಟ್ಟಿಗೆ ಹಾಗೂ ಜೇನು ಹುಳಗಳನ್ನು ನೀಡಲಾಗುತ್ತಿದ್ದು, ಜೇನು ಪೆಟ್ಟಿಗೆ ನೀಡುವ ಸಮಯದಲ್ಲಿ ತಾಂತ್ರಿಕವಾಗಿ ನುರಿತ ತರಬೇತುದಾರರಿಂದ ಜೇನು ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಗಿರುತ್ತದೆ.<br>ಮುಂದಿನ ದಿನಗಳಲ್ಲಿ ಜೇನು ಸಾಕಾಣಿಕೆ ಕಾರ್ಯಕ್ರಮಗಳನ್ನು ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳುವಂತೆ ನೋಡಲ್ ಏಜೆನ್ಸಿ ಸಭೆಯಲ್ಲಿ ನಿರ್ದೇಶನ ನೀಡಿರುವುದರಿಂದ ಈ ಕಾರ್ಯಕ್ರಮವನ್ನು ಅರಣ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವುದಿಲ್ಲ ಎಂಬ ಮಾಹಿತಿಯನ್ನು ಸಲ್ಲಿಸಿದೆ. |

ಈಗಾಗಲೇ ಅನುಷ್ಠಾನಗೊಳಿಸಿರುವ ಕಾಮಗಾರಿಗಳಿಗೆ ಮೇಲ್ಕಂಡ ಶಿಫಾರಸ್ಸಿನಂತೆ ಸೂಕ್ತ ಕ್ರಮಕೈಗೊಳ್ಳುವಂತೆ ವಲಯ ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಮೇಲ್ಕಂಡ ಸೂಚನೆಯನ್ವಯ ಕಾಮಗಾರಿಯು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುವುದೆಂದು ಘಟಕಾಧಿಕಾರಿಗಳು ತಿಳಿಸಿರುತ್ತಾರೆಂಬ ಮಾಹಿತಿಯನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದೆ.

ತಮ್ಮ ನಂಬುಗೆಯ,

11/2/24

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು.

1. ಪ್ರತಿಯನ್ನು ಗೌರವಗಳೊಂದಿಗೆ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕೊಠಡಿ ಸಂಖ್ಯೆ: 701, 7ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2. ಪ್ರತಿಯನ್ನು ಗೌರವಗಳೊಂದಿಗೆ ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಕೊಠಡಿ ಸಂಖ್ಯೆ: 542, 5ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.